# ಪರೀಕ್ಷೆಯಲ್ಲಿ ಗೆದ್ದ ಅಲೆಕ್ಸಾಂಡರ್



ಸುಮಾರು ಎರಡು ಸಾವಿರ ವರ್ಷಗಳ ಹಿಂದಿನ ಮಾತು. ಗ್ರೀಸ್ ದೇಶದ ಮೆಸಿಡೋನಿಯಾದಲ್ಲಿ ಫಿಲಿಪ್ಸ್ ಎಂಬ ದೊರೆ ಆಳುತ್ತಿದ್ದ. ಆತನಿಗೆ ಮಗನೊಬ್ಬನಿದ್ದ. ತನ್ನ ಮಗನು ವೀರಯೋಧ, ಪ್ರಜಾಪ್ರೇಮಿ, ಉತ್ತಮ ಆಡಳಿತಗಾರ ಮತ್ತು ಸಹನಾ ಮೂರ್ತಿಯಾಗಬೇಕೆಂದು ಫಿಲಿಪ್ಸ್ ಬಯಸುತ್ತಿದ್ದ. ಹೀಗಾಗಿ ಆತನನ್ನು ಪ್ರಾಥಮಿಕ ಶಾಲೆಯೊಂದಕ್ಕೆ ಸೇರಿಸಿ ಶಿಕ್ಷಣ ಕೊಡಿಸಿದ. ನಂತರ ಉನ್ನತ ಶಿಕ್ಷಣ ಕೊಡಿಸಬೇಕಿತ್ತು.

ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ ಪಡೆಯಲು ಆಯ್ಕೆ ಪರೀಕ್ಷೆ ನಡೆಯುತ್ತಿತ್ತು. ಇದು ಎಲ್ಲರಿಗೂ ಕಡ್ಡಾಯವಾಗಿತ್ತು. ದೊರೆಯ ಮಗನೂ ಇದನ್ನು ಎದುರಿಸಬೇಕಿತ್ತು. ಹಾಗಾದರೆ ಪರೀಕ್ಷೆ ಏನೆಂಬ ಕುತೂಹಲ ಅಲ್ಲವೇ?

ಇದೊಂದು ಕಠಿಣ ಪರೀಕ್ಷೆಯಾಗಿತ್ತು. ವಿದ್ಯಾರ್ಥಿಗಳ ಕೈಯಲ್ಲಿ ಪಾತ್ರೆಯೊಂದನ್ನಿಟ್ಟು ಅದರಲ್ಲಿ ನಿಗಿ ನಿಗಿ ಉರಿಯುವ ಕಲ್ಲಿದ್ದಲಿನ ಕೆಂಡವನ್ನು ಹಾಕಲಾಗುತ್ತಿತ್ತು. ಅದು ಕೈಯಲ್ಲಿರುವಾಗ ವಿದ್ಯಾರ್ಥಿಗಳು ತೋರಿಸುವ ಸಹನೆಯ ಆಧಾರದ ಮೇಲೆ ಅವರ ಆಯ್ಕೆ ನಡೆಯುತ್ತಿತ್ತು. ರಾಜಕುಮಾರನ ಸಹನೆಯ ಪರೀಕ್ಷೆಯ ಸಮಯ ಬಂತು. ರಾಜಕುಮಾರನೊಂದಿಗೆ ದೊರೆ ಫಿಲಿಪ್ಸ್ ಮತ್ತು ರಾಣಿ ಮಗನ ಪರೀಕ್ಷೆಗೆ ಆಗಮಿಸಿದರು. ರಾಜಕುಮಾರನ ಕೈಯಲ್ಲಿ ಪಾತ್ರೆಯನ್ನಿಡಲಾಯಿತು. ಅದರಲ್ಲಿ ಕಲ್ಲಿದ್ದಲಿನ ಕೆಂಡವನ್ನು ಹಾಕಲಾಯಿತು. ಆಗ ಒಂದು ಅಚಾತುರ್ಯ ನಡೆಯಿತು. ನಿಗಿ ನಿಗಿ ಉರಿಯುವ ಕಲ್ಲಿದ್ದಲಿನ ಕೆಂಡವೊಂದು ರಾಜಕುಮಾರನ ಕಾಲಿನ ಮೇಲೆ ಬಿತ್ತು. ಅದು ರಾಜಕುಮಾರನ ಚರ್ಮವನ್ನು ಸುಡತೊಡಗಿತು. ಅನಂತರ ಮಾಂಸಖಂಡವೂ ಸುಡತೊಡಗಿತು. ಸುಟ್ಟ ಕರಕಲ ವಾಸನೆ ಬರತೊಡಗಿತು. ರಾಜಕುಮಾರ ಮಿಸುಗದಂತೆ ನಿಂತುಕೊಂಡಿದ್ದ. ತಾಯಿಗೆ ತಡೆದುಕೊಳ್ಳಲಾಗಲಿಲ್ಲ. ಕೆಂಡವನ್ನು ತೆಗೆಯಲು ಮೇಲಕ್ಕೆದ್ದಳು.

ದೊರೆ ಇದಕ್ಕೆ ಒಪ್ಪಲಿಲ್ಲ. ಕೈ ಸನ್ನೆ ಮಾಡಿ ಅವಳನ್ನು ಸುಮ್ಮನಿರಿಸಿದ. ರಾಣಿಯ ಕಣ್ಣುಗಳು ಒದ್ದೆಯಾದವು. ದೊರೆ ಸಮಾಧಾನಿಸಿದ.

'ನೋಡು ಅವನು ಸಹನೆಯ ಮೂರ್ತಿಯಾಗಬೇಕು. ಅದಕ್ಕಾಗಿ ಇಂತಹ ಕಷ್ಟಗಳನ್ನೆಲ್ಲ ಸಹಿಸಲೇಬೇಕು. ಹಿಡಿದ ಕೆಲಸವನ್ನು ಬಿಡದಂತೆ ಸಾಧಿಸುವ ಛಲ ಹೊಂದಬೇಕು. ಗುರಿ ಮುಟ್ಟುವವರೆಗೆ ಹೋರಾಡುವ ಛಾತಿ ಬರಬೇಕು' ಎಂದ ದೊರೆ.

'ರಾಜನಾಗಬೇಕಾದವನಿಗೂ ಇಂಥ ಕಠಿಣ ಶಿಕ್ಷಣವೇ?' ಎಂದು ಕೇಳಿದಳು ರಾಣಿ.

'ಹೌದು. ಆತ ಗ್ರೀಸ್ ದೇಶವನ್ನು ಆಳಬೇಕಾದವನು. ಅವನು ಬೇರೆಯವರಿಗಿಂತ ಧೈರ್ಯ, ಸಾಹಸದಲ್ಲಿ, ದೃಢ ನಿಶ್ಚಯದಲ್ಲಿ, ಸಹನೆಯಲ್ಲಿ ಮುಂದಿರಬೇಕು. ಅಂದಾಗ ಮಾತ್ರ ಪ್ರಜೆಗಳು, ಸೈನಿಕರಿಗೆ ಮಾದರಿಯಾಗುತ್ತಾನೆ' ಎಂದು ದೊರೆ ವಿವರಿಸಿದ.

ದೊರೆಯ ಮಾತಿಗೆ ರಾಣಿ ಪ್ರತ್ಯುತ್ತರ ನೀಡಲಿಲ್ಲ. ರಾಜಕುಮಾರ ಪರೀಕ್ಷೆಯಲ್ಲಿ ಉತ್ತೀರ್ಣನಾದ. ಮುಂದೆ ಈತ ಸೈನಿಕ ಶಿಕ್ಷಣ ಪಡೆದು ಚಿಕ್ಕ ವಯಸ್ಸಿನಲ್ಲೇ ಅರ್ಧ ಪ್ರಪಂಚವನ್ನು ಗೆದ್ದ ಮೊದಲ ಚಕ್ರವರ್ತಿಯಾದ. ಇಡೀ ಜಗತ್ತನ್ನೇ ಗೆಲ್ಲುವ ಹಂಬಲವಿರಿಸಿಕೊಂಡಿದ್ದ.

ಮಕ್ಕಳೇ, ಈ ರಾಜಕುಮಾರ ಯಾರೆಂದು ನಿಮಗೆ ಗೊತ್ತಾಯಿತೇ? ಅವನೇ ಗ್ರೀಸ್ ದೊರೆ ಅಲೆಕ್ಸಾಂಡರ್!

**(ಸಂಗ್ರಹ) ಪ್ರಕಾಶ್ ಎಸ್. ಮನ್ನಂಗಿ**

## ನಿಮಗೆಷ್ಟು ಗೊತ್ತು

## ನೀರೇ ಕುಡಿಯದ ಪ್ರಾಣಿ



ಪ್ರಾಣಿಗಳೆಂದರೆ ಅವು ನೀರಿಲ್ಲದೆ ಬದುಕುವುದು ಅಸಾಧ್ಯ.ಆದರೆ ಜೀವಿತಾವಧಿಯಲ್ಲಿ ಒಮ್ಮೆಯೂ ನೀರನ್ನು ಕುಡಿಯದೇ ಇರುವ ಪ್ರಾಣಿಯೊಂದಿದೆ. ಅದೇ ಮರುಭೂಮಿಯ ಕಾಂಗರೂ ಇಲಿ. ಅಮೆರಿಕಾದ ಕ್ಯಾಲಿಫೋರ್ನಿಯಾದ ಶುಷ್ಕ ಮರುಭೂಮಿಗಳಲ್ಲಿ ಹೆಚ್ಚಾಗಿ ಕಂಡುಬರುವ ಈ ಕಾಂಗರೂ ಇಲಿಗಳು ಬಾಲ ಹಾಗೂ ಕಾಲುಗಳ ರಚನೆಯಲ್ಲಿ ಆಸ್ಟ್ರೇಲಿಯಾದ ಕಾಂಗರೂಗಳನ್ನು ಹೋಲುತ್ತವೆ ಮತ್ತು ಕಾಂಗರೂಗಳಂತೆಯೇ ನೆಗೆಯುತ್ತಾ ಓಡುತ್ತವೆ. ಈ ಕಾರಣಕ್ಕಾಗಿಯೇ ಇವುಗಳಿಗೆ ಕಾಂಗರೂ ಇಲಿಗಳೆಂದು ಕರೆಯಲಾಗುತ್ತದೆ.

ಬೆವರುವುದು ಇವಕ್ಕೆ ಗೊತ್ತೇ ಇಲ್ಲ. ಏಕೆಂದರೆ ಇವುಗಳು ಬೆವರಿನ ಮೂಲಕ ಬಿಡುಗಡೆಯಾಗುವ ತೇವಾಂಶವನ್ನು ಉಸಿರಿನ ಮೂಲಕ ಪುನಃ ಹೀರಿಕೊಳ್ಳುವುದರಿಂದ ಅವುಗಳು ಬೆವರಿದಂತೆ ಅನಿಸುವುದೇ ಇಲ್ಲ ಮತ್ತು ಅವುಗಳ ದೇಹದಿಂದ ಹೊರಹಾಕಲ್ಪಡುವ ನೀರಿನ ಅಂಶವೂ ಸಹ ವ್ಯರ್ಥವೆನಿಸದು. ಕಾಂಗರೂ ಇಲಿಯು ಮರುಭೂಮಿ ಜೀವಿಯಾಗಿರುವುದರಿಂದ ಅದು ತಿನ್ನುವ ಸಸ್ಯದ ಬೇರು ಹಾಗೂ ಬೀಜಗಳಿಂದ ದೇಹಕ್ಕೆ ಅವಶ್ಯಕವಾದ ತೇವಾಂಶವನ್ನು ದೊರಕಿಸಿಕೊಳ್ಳುತ್ತದೆ. ಆಹಾರದಿಂದಲೇ ತನಗೆ ಅಗತ್ಯವಾದ ನೀರನ್ನು ಪಡೆದುಕೊಳ್ಳುವುದರಿಂದ ಪ್ರತ್ಯೇಕವಾಗಿ ನೀರನ್ನು ಕುಡಿಯುವ ಅವಶ್ಯಕತೆ ಇಲ್ಲ. ಆದ್ದರಿಂದ ಅದು ಜೀವಿತಾವಧಿಯುದ್ದಕ್ಕೂ ನೀರನ್ನೇ ಸೇವಿಸುವುದಿಲ್ಲ.

**-ಹರೀಶ್**